ಬಸವಾ... ಬಸವಾ... ಹುಡುಗ ಛಲೋ ಅದಾನು. ನಿನ್ನ ಇಷ್ಟದಂಗ ಕಾರೇವು ಮಾಡಿದರಾತು. ಇನ್ನು ನಿಮ್ಮ ಮನಿಕಡೆಯಿಂದ ಏನಂತಾರಪಾ ದೊರೆ? ಗ್ರೀನ್ ಸಿಗ್ನಲ್ ಸಿಗುತ್ತಿದ್ದಂತೆ ವಿನಿತಾಳ ಮುಖದ ಮೇಲಿನ ಮಂದಹಾಸ ಇಮ್ಮಡಿಸಿ ಆ ಇಡೀ ಕತ್ತಲಿಗೆ ನೆಶೆ ಏರಿದಂತೆ ಕುಣಿಯತೊಡಗಿತು. ವೈರಮುಡಿ ಈಗ ಸಂಕೋಚವಿಲ್ಲದೆ ಅಪ್ಪನೊಡನೆ ಮಾತಾಡುತ್ತ ಕಾರಿನವರೆಗೂ ಬಂದು ಬೀಳ್ಕೊಟ್ಟ.

ವಿನಿತಾಳ ಅಪ್ಪ ಪ್ರಸ್ತುತ ಆಡಳಿತ ಪಕ್ಷದಲ್ಲಿ ಹೆಸರಾಂತ ವ್ಯಕ್ತಿ. ಭುಗಿಲೆದ್ದ ಅಸಮಾಧಾನದ ಹೊಗೆಯನ್ನ ತಣ್ಣಗೆ ಮಾಡಲಿಕ್ಕಾಗಿ ತನಗ ಸಿಗಬೇಕಾಗಿದ್ದ ಮಂತ್ರಿಗಿರಿಯನ್ನ ತ್ಯಜಿಸಿ ಬರೀ ಶಾಸಕರಾಗಷ್ಟೆ ಉಳಿದಿದ್ದರು. ಮಾತಿಗೊಮ್ಮೆ 'ಬಸವಾ' ಅನ್ನುವ ಅವರ ಶಬುದಕ್ಕೆ ಶಾಸಕಾಂಗದ ಎಲ್ಲ ಮಹೋದಯರು ಸಣಮಾಡುವುದನ್ನ ರೂಢಿಸಿಕೊಂಡಿದ್ದರು. ಈ ಬಸವಾ ಅನ್ನುವುದು ಪೂರ್ವಿಕರಿಂದ ಬಳುವಳಿಯಾಗಿ ಬಂದದ್ದಕ್ಕೋ ಏನೋ... ಎಡವಿದಾಗ, ಆಕಳಿಸಿದಾಗ, ಸೀನಿದಾಗ, ಕೆಮ್ಮಿದಾಗ ಹಿಂಗ ಅವಕಾಶ ಸಿಕ್ಕಲ್ಲೆಲ್ಲ ಬಸವ ಬಸವ ಅನ್ನುತ್ತಿದ್ದರು. ಒಟ್ಟಿನಮ್ಯಾಲ ವಿನಿತಾಳ ತಂದೆ ಬಸವಣ್ಣನವರ ಪಕ್ಕಾ ಫಾಲೋವರ್ ಆದ್ದರಿಂದ ಈ ಪ್ರತಿಲೋಮ ವಿವಾಹಕ್ಕೆ ಅಸ್ತು ಅಂದಿದ್ದರು.

## ಬಣ್ಣದ ಬದುಕಿನ ಬಂಡಿ...

ಗಾಂಧರ್ವ ರೀತ್ಯಾ ಮದುವೆಯಾಗಿದೆ, ಮನಸ್ಸು ಒಂದಾಗಿರುವಾಗ ಮೈ ಕಲೆತುಕೊಳ್ಳಲು ತಾಳಿ ಎಂಬುದೊಂದು ಬೇಕೇ?... ಹೀಗೇ ಇದ್ದುಬಿಡೋಣ ಎನ್ನುತ್ತಿದ್ದ ವೈರಮುಡಿ ಎಳ್ಳಷ್ಟು ಬದಲಾಗಿರಲಿಲ್ಲ. ವಿನಿತಾಳ ನವಿರೆದ್ದ ಭಾವ ವಿರಮಿಸಲಾರದಂತೆ ಅಪ್ಪನೆಂಬ ಆಲಕ್ಕೆ ಜೋತುಬಿದ್ದಿತ್ತು. ಅಣ್ಣಂದಿರರು ಯಾವ ಗರ್ಜಿಲ್ಲದಂತೆ ವಿದೇಶದಲ್ಲಿ ಓದಿ ತಮಗಿಷ್ಟ ಬಂದ ಹುಡುಗಿಯರನ್ನು ಮದುವೆಯಾಗಿದ್ದರು. ಅಕ್ಕ ಮದುವೆಯ ಮಾತೆತ್ತಿದರೆ ಉರಿದುಬೀಳುತ್ತಿದ್ದಳಾದ್ದರಿಂದ ಆಕೆ ಬ್ರಹ್ಮಕುಮಾರಿಯಾಗಿ ಶಾಣಪ್ಪನವರ ಅಧ್ಯಾತ್ಮದ ಸೆಳವಿಗೆ ಸಿಕ್ಕು ದಡಕಾಣದ ಹುಲ್ಲೆಸಳಂತೆ ದಿಕ್ಕುದೆಸೆಯೆನ್ನದೆ ನೀರಿನ ಹರವಿನಲ್ಲಿ ಓಡುತ್ತಿದ್ದಳು. ಅದೆಷ್ಟೊಂದು ಜನ ಹಾರೈಸುವವರಿದ್ದಾರೆ, ಮುಯ್ಯಿ ತೀರಿಸುವವರಿದ್ದಾರೆ, ಶಾಸಕರ ಮಗಳ ಮದುವೆಗಾಗಿ ಹಗಲಿರುಳೆನ್ನದೆ ಹಂದರಕಟ್ಟಿ, ಅರಿಸಿನ ಆಡಿ, ದಿಬ್ಬಣದ ಹುಡುಗಾಟಿಕೆ, ಸಂತೆಸಲಕರಣೆ, ವಧುವರರ ನಡುವಿನ ಪಂದ್ಯಾಟ, ಅತ್ತೆಮಾವರ ಬಾಗೀನ ಹೀಗೆ ಮದುವೆ ಸುತ್ತ ಏನೆಲ್ಲ ಆಚರಣೆಗಳಿವೆಯೋ ಅವನ್ನೆಲ್ಲ ಹುದ್ದರಿಯಾಗಿ ಅನುಭವಿಸಬೇಕು. ಆ ಸಮೂಹಸನ್ನಿಯ ಸಂಭ್ರಮವನ್ನು ಕಣ್ಣಾರೆ ಕಾಣಬೇಕೆಂಬ ಹಂಬಲದಲ್ಲಿದ್ದಳು.

ಇದು ಅರ್ಥವಿಲ್ಲದ ಖರ್ಚಿನ ದಾರಿ, ದಯಮಾಡಿ ಈ ಅದ್ದೂರಿತನದ ಮದುವೆ ಬೇಡವೆಂದೂ ಮಂತ್ರಮಾಗಲ್ಯದ ರೀತಿಯಲ್ಲಿ ಮದುವೆ ಆಗೋಣವೆಂದೂ ವೈರಮುಡಿ ಪೀಡಿಸುತ್ತಲಿದ್ದ. ಸೆರಗಿಗಂಟಿದ ದೂಳಿನಂತೆ ಅವನ ಮಾತನ್ನು ನಿರ್ಲಕ್ಷಿಸಿ ಊರಿಗೆಲ್ಲ ಊಟ ಹಾಕಿಸಿ ಭರ್ಜರಿಯಂದರೆ, ಮಾಜಿ ಸಚಿವರ ಯೋಗ್ಯತೆಗನುಸಾರ ಮದುವೆ ಆಗಿದ್ದಳು. ಮದುಮಕ್ಕಳಿಗೆ ಧಾರವಾಡದ ಮನೆಯನ್ನು ಉಡುಗೊರೆ ನೀಡಿ ಮಂಡ್ಯದ ಬೀಗರ ಬಾಡೂಟವನ್ನು ನೂರಾಎಂಟು ಕಾರ್ಯಕ್ರಮಗಳ, ಗುದ್ದಲಿಪೂಜೆಗಳ ಯಾದಿಯನ್ನು ತೋರಿಸಿ ನಯವಾಗಿ ತಿರಸ್ಕರಿಸುತ್ತ ಶಾಣಪ್ಪನವರು ತಮ್ಮ ರಾಜಕೀಯದಲ್ಲಿ ಬ್ಯೂಸಿಯಾದರು. ಶಾಣಪ್ಪನವರ ಸಮಸ್ತ ಆಸ್ತಿ ಆಖೈರುಗಳ ಉಸ್ತುವಾರಿ ನೋಡಿಕೊಳ್ಳುವ ಸಲುವಾಗಿ ವಿನಿತ ತನ್ನ